<u>ದಿನಾಂಕ 19-07-2022 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಆರ್ ವಿ ಡಬ್ಲ್ಯೂ ವಕೀಲರಿಂದ :</u>

**2.** ದಾವಾ ಆಸ್ತಿಗಳು ನನ್ನ ಅಜ್ಜ ಅಮ್ಮನ ಆಸ್ತಿಯಾಗಿವೆ. ನಿಮ್ಮ ಮನೆತನಕ್ಕೆ ಆಸ್ತಿಗಳು ಹೇಗೆ ಬಂತು ಎಂದರೆ ನನ್ನ ತಂದೆಗೆ ಬಂತು, ನನ್ನ ತಂದೆಯಿಂದ ನನಗೆ ಬಂತು. ದಾವಾ ಆಸ್ತಿಯ ಮೂಲ ಸರ್ವೆ ನಂ.**20.** ದಾವಾ ಆಸ್ತಿ ವಾದಿಯ ಹೆಸರಿನಲ್ಲಿ ಪೋಕಳ ದಾಖಲಾಗಿತ್ತು ಎಂಬ ಬಗ್ಗೆ ನಾನು ದಾಖಲೆ ನೋಡಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ. ಪೋಕಳ ಆಗಿದೆ ಎಂದು ನಾನು ಬರೆದು ಹಾಕಿಲ್ಲ. ಶಾನುಬೋಗರು ಯಾವುದೇ ಆದೇಶವಿಲ್ಲದೇ ಆಸ್ತಿಯಲ್ಲಿ ದಾಖಲು ಮಾಡಿದರೆ ಅದನ್ನು ಪೋಕಳ ಎನ್ನುತ್ತಾರೆ ಎಂದರೆ ಸರಿ. ನಿ ಪಿ **2** ರಂತೆ **1956** ರ ಡ ನಂಬರ್ **78** ರ ಪ್ರಕಾರ ದಾವಾ ಆಸ್ತಿಯಲ್ಲಿ ವಾದಿಯ ಹೆಸರನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ರೈತ ಎಂದು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಹಾಜರಾದ ನಂತರ ನಿ ಪಿ **2** ರ ದಾಖಲೆಯನ್ನು ನನ್ನ ವಕೀಲರ ಮೂಲಕ ಓದಿ ತಿಳಿದುಕೊಂಡಿಲ್ಲ. ನಿ ಪಿ **2** ರ ಬಗ್ಗೆ ನನಗೆ ಒಪ್ಪಿಗೆ ಇಲ್ಲ ಎಂದರೆ ನಾನು ಅದನ್ನು ಓದಿಲ್ಲ. ನಿ ಪಿ **2** ರ ದಾಖಲೆಯನ್ನು ಬೆಂಗಳೂರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಾವು ಪ್ರಶ್ನಿಸಿದ್ದೇವೆ. ಅದರ ಸಂಖ್ಯೆ ಗೊತ್ತಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು **1955** ರಿಂದ **1978** ರವರೆಗೆ ವಾದಿಯೇ ವಹಿವಾಟು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಹಾನಗಲ್ ಭೂ ನ್ಯಾಯ ಮಂಡಳಿಯು ದಾವಾ ಆಸ್ತಿಯ ಬಗ್ಗೆ ಆದೇಶ ಮಾಡಿದ ನಂತರ ನಾನು ವಾದಿಗೆ ತೊಂದರೆ ಕೊಡಲು ಪ್ರಾರಂಭಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರಕಾರಕ್ಕೆ ಸೇರಿದೆ ಎಂದು ನಿ ಪಿ **6** ರ ಪ್ರಕಾರ ಡ ನಂ.**638** ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಡ ನಂಬರನ್ನು ನಾನು ಪ್ರಶ್ನಿಸಿದ್ದೇನೆ. ಇದೇ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನೆ. ನಿ ಪಿ **6** ನ್ನು ನಾನು ಈ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

**3.** ನಿ ಪಿ **9** ನ್ನು ಯಾವುದೇ ಕಂದಾಯ ಅಧಿಕಾರಿಗಳು ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಆದೇಶ ಇಲ್ಲದೇ ಇರುವ ಡ ನಂಬರನ್ನು ನಾನು ಹಾಜರುಪಡಿಸಿದ್ದು ಅದು ಪೋಕಳ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ಧ ವಾದಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದರು ಎಂದರೆ ನಾನು ಸಲ್ಲಿಸಿದ್ದೇನೆ. ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ಧ ವಾದಿ ನಿ ಪಿ **10** ರ ಪ್ರಕಾರ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದಾರೆಯೇ ಹೊರತು ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣವು ವಕೀಲರು ಹಾಜರಾಗದೇ ವಜಾಗೊಂಡಿದೆಯೇ ಹೊರತು ಭೂ ನ್ಯಾಯ ಮಂಡಳಿಯ ಆದೇಶ ಸರಿ ಎಂದು ವಜಾ ಆಗಿಲ್ಲ ಎಂದರೆ ಸರಿಯಲ್ಲ. ವಾದಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗುವ ಪೂರ್ವದಲ್ಲಿಯೇ ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ವಾದಿಯ ಹೆಸರನ್ನು ತೆಗೆದು ಹಾಕಿ ನನ್ನ ಹೆಸರನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ರೈತ ತನ್ನ ಹಕ್ಕನ್ನು ಶರಣಾಗತಿ ಮಾಡುವ ಬಗ್ಗೆ ಹಾಗೂ ಭೂ ಮಾಲೀಕರು ಅದನ್ನು ರೈತನಿಂದ ಮರುಪಡೆಯುವ ಬಗೆಗ ಏನಾದರೂ ಕ್ರಮ ಜರುಗಿಸಿದ್ದೀರಾ ಎಂದರೆ ಇಲ್ಲ. ಆ ಎರಡೂ ಪ್ರಕ್ರಿಯೆಗಳು ನಡೆಯದೇ ಇದ್ದ ಕಾರಣ ದಾವಾ ಆಸ್ತಿ ಸರಕಾರಕ್ಕೆ ಸೇರಿದೆ ಎಂದರೆ ಸರಿಯಲ್ಲ.

**4.** ನಾನು ಮನೆ ಕಟ್ಟಲು ಸರಕಾರದಿಂದ ಪರವಾನಿಗೆ ಪಡೆದಿಲ್ಲ. ವಾದಿ ದಾವಾ ಆಸ್ತಿಯನ್ನು ಕಳೆದ **50** ವರ್ಷಗಳಿಂದ ಕಬಜಾ ಹೊಂದಿ ಮನೆ ಕಟ್ಟಿಕೊಂಡಿದ್ದಾರೆಯೇ ಹೊರತು ನಾನು ಮನೆ ಕಟ್ಟಿಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿ ಮನೆ ಕಟ್ಟಿಕೊಂಡು ತನ್ನ ಸಂಸಾರದ ಸಮೇತ ಅಲ್ಲಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಭತ್ತ, ಗೋವಿನಜೋಳ ಮತ್ತು ಮಾವು ಬೆಳೆಯುತ್ತೇನೆ. ಆ ಬೆಳೆ ಬೆಳೆಯುತ್ತಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ಭತತ, ಗೋವಿನ ಜೋಳ ಮತ್ತು ಮಾವು ಬೆಳೆಸುತ್ತಾ ಬಂದಿದ್ದಾರೆಯೇ ಹೊರತು ನಾನಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಸವಣ್ಣೆಪ್ಪ ಫಕ್ಕೀರಪ್ಪ ಯಲ್ಲಾಪೂರ ಎಂಬ ತಮ್ಮ ಇದ್ದರು. **1** ರಿಂದ **4** ನೇ ಪ್ರತಿವಾದಿಯರು ನನ್ನ ತಂದೆಯ ತಮ್ಮನ ಮಕ್ಕಳು. ಪ್ರತಿವಾದಿಯರನ್ನು ಹೊರರತುಪಡಿಸಿ ನಮ್ಮ ಮನೆತನಕ್ಕೆ ಬೇರೆ ವಾರಸುದಾರರು ಇಲ್ಲ. ದಾವಾ ಆಸ್ತಿಯ ಬಗ್ಗೆ **1974-75** ರಲ್ಲಿ ಡ ನಂಬರ್ **638** ರ ಪ್ರಕಾರ ಸರಕಾರ ಎಂದು

ದಾಖಲಾಗಿರುವುದನ್ನು ನಾನು ಪ್ರಶ್ನೆ ಮಾಡಿಲ್ಲ. ಆ ರೀತಿ ಮಾಡಲು ನನಗೆ ತೊಂದರೆ ಇರಲಿಲ್ಲ. ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನನ್ನ ಹೆಸರನ್ನು ದಾಖಲಿಸಿಕೊಂಡು ದಾವಾ ಆಸ್ತಿ ನನ್ನದು ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1981 ರಲ್ಲಿ ಭೂ ನ್ಯಾಯ ಮಂಡಳಿಯಿಂದ ಆದ ಆದೇಶದ ಬಗ್ಗೆ ನನಗೆ ಸಂಪೂರ್ಣ ಒಪ್ಪಿಗೆ ಇದೆ. ಸದರಿ ಭೂ ನ್ಯಾಯ ಮಂಡಳಿಯ ಆದೇಶದಲ್ಲಿ 1955 ರಿಂದ 1978 ರವರೆಗೆ ವಾದಿಯ ಪೂರ್ವಜರು ದಾವಾ ಆಸ್ತಿಯ ಕಬಜಾ ವಹಿವಾಟಿಯಲ್ಲಿ ಇದ್ದಾರೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯವರ ಸದರಿ ಆದೇಶವನ್ನು ನಾನು ಪ್ರಶ್ನೆ ಮಾಡಿಲ್ಲ. ವಾಸ್ತವಿಕವಾಗಿ ದಾವಾ ಆಸ್ತಿಯನ್ನು ಯಾರು ಸಾಗುವಳಿ ಮಾಡುತ್ತಿದ್ದರೋ ಅದೇ ರೀತಿ ಬರೆದಿರುವ ಕಾರಣ ನಾನು ಅದನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿ ಕಾನೂನುಬದ್ಧವಾಗಿ ಸರಕಾರಕ್ಕೆ ಸೇರಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರಕಾರಕ್ಕೆ ಸೇರಿರುವ ಕಾರಣ ವಾದಿ ಹಿಂದಿನಿಂದಲೂ ರೈತನಾಗಿದ್ದು ಅದನ್ನು ಸಾಗುವಳಿ ಮಾಡುತ್ತಿದ್ದ ಕಾರಣ ಆತನೇ ಮುಂದುವರೆಸಿಕೊಂಡು ಬಂದಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಕಂದಾಯ ಹಾಗೂ ನೀರಿನ ಕಂದಾಯ ಪಾವತಿಸಿದ್ದೀರಾ ಎಂದರೆ ಯಾರೂ ಪಾವತಿಸುತ್ತಿಲ್ಲ. ನಾನು ಕಂದಾಯ ಪಾವತಿಸಿಲ್ಲ. ದಾವಾ ಆಸ್ತಿ ಸಂಪೂರ್ಣವಾಗಿ ಸರಕಾರದ ಸ್ವತ್ತಾಗಿರುವುದರಿಂದ ನಾನು ಯಾವುದೇ ಕಂದಾಯ ಪಾವತಿಸಿಲ್ಲ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿರುವುದನ್ನು ಕಂಡು ನನಗೆ ಅಸೂಯೆಯಾಗಿ ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾಖಲೆಯಲ್ಲಿ ನನ್ನ ಹೆಸರನ್ನು ಬದಲಾಯಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

- ಸಹಿ -
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್